

ಕೃಷ್ಣ ದೇವಾಂಗಮಠ
ಕಲೆ: ಬಸವರಾಜ ಕಲೆಗಾರ



# ಗಜ಼ಲ್

ಜಗದೆದೆಯಲ್ಲಿ ಜೀವ ಬದುಕುವಷ್ಟು ಪ್ರೀತಿಯಿರಲಿ ಸಾಕು
ನನ್ನೆದೆಯಲ್ಲಿ ನೆನಪು ಖಾಲಿಯಾಗದಷ್ಟು ನೋವಿರಲಿ ಸಾಕು

ನಯನದಲೆಯಲಿ ತೋಯುವಷ್ಟು ಕನಸಿರಲಿ
ಮಿಂಚಿನ ಹಕ್ಕಿ ನಿರಾಳ ಸಂಚರಿಸುವಷ್ಟು ಮುಗಿಲಿರಲಿ ಸಾಕು

ಜಾತ್ರೆಯಲಿ ತೇರು ಕಾಣುವಷ್ಟು ವರವಿರಲಿ
ನಿನ್ನ ಕರುಣೆಯ ತೈಲ ಉರಿಯುವಷ್ಟು ಒಲವಿರಲಿ ಸಾಕು

ಬಯಕೆಯಲಿ ದೇಹ ಬಾಡದಷ್ಟು ಕಾಮವಿರಲಿ
ದೋಣಿ ತಾ ತೂಕಡಿಸದೆ ಸಾಗುವಷ್ಟು ಎಚ್ಚರವಿರಲಿ ಸಾಕು

ಬಲಿಷ್ಟ ರೆಕ್ಕೆಗಳು ಸೋಲದಷ್ಟು ಚೈತನ್ಯವಿರಲಿ
ಮಳೆ ಬಿದ್ದು ಮಣ್ಣ ವಾಸನೆ ಬಡೆಯುವಷ್ಟು ಕಂಪಿರಲಿ ಸಾಕು

ನಿನ್ನ ಆಲಿಂಗಿಸಿ ಮಲಗುವಷ್ಟು ಹಿತವಿರಲಿ
ಒಬ್ಬರೊಬ್ಬರು ಇದಿರು ಬದಿರಾಗುವಷ್ಟು ನಗುವಿರಲಿ ಸಾಕು

ಬಂಜೆ ಒಮ್ಮೆ ಬಸಿರಾಗುವಷ್ಟು ದಯೆಯಿರಲಿ
ಅಳುವ ಮಗುವಿನ ದನಿ ಕೇಳುವಷ್ಟು ರೋಮಾಂಚನವಿರಲಿ ಸಾಕು

ಮಳೆ ಸುರಿದರೆ ನಿನ್ನ ಕಂಡಷ್ಟು ಸಂತಸವಿರಲಿ
ಮೀನುಗಾರರ ಮನೆಯ ಒಲೆ ಹೊತ್ತುವಷ್ಟು ಮೀನುಗಳಿರಲಿ ಸಾಕು

ಕಾಲ ದೇವರನ್ನು ನಂಬುವಷ್ಟಾದರೂ ಉಳಿದಿರಲಿ ಸಾಕು
ಕೃಷ್ಣನ ಕೈಗೆ ಹೊಸತಾದ ಪದ್ಯ ಬರೆಯುವಷ್ಟು ಕಸುವಿರಲಿ ಸಾಕು



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68